ದೇಹದ ಬಯಕೆಯನ್ನು ಪೊರೆಯುವುದೇ ಪ್ರೇಮವೆಂದರೆ ಅಡ್ಡಿಯಿಲ್ಲ ಎಂಬ ಸಿದ್ಧಾಂತವನ್ನು ನಂಬಿದವನು ನಾನು. ಈಗ ಹೀಗೇಕೆ...

ಸಂಜೆ ಮೊಬೈಲಿನಲ್ಲಿ ಉಲಿದಳು, 'ರಾತ್ರಿ ಡಿನ್ನರಿಗೆ ಹೊರ ಹೋಗೋಣ ಬರ್ತೀಯ? ಐ ವಾಂಟ್ ಟು ಶೇರ್ ಸಮ್ಥಿಂಗ್ ವಿತ್ ಯೂ' ಎಂದಳು.

ದರಿದ್ರದವಳು ಹತ್ತಿರ ಬಂದು ಮತ್ತೇರಿಸಿ, ಮತ್ತೇರಿಸಿದಷ್ಟೇ ಬೇಗ ಇಳಿಸಿ ಕಿಕ್ ತಗೋತಾಳೆ. ಹೋಗಬಾರದು ಎಂದುಕೊಂಡೆ. ಹೋಗದೆ ಇರಲಾಗಲಿಲ್ಲ.

ಇಟಾಲಿಯನ್ ಪಾಸ್ತಾದಲ್ಲಿ ಚಮಚೆಯಾಡಿಸುತ್ತಾ... 'ಸೀ ರಾಹುಲ್, ಲುಕ್ ಎಟ್ ದಿಸ್' ಎನ್ನುತ್ತಾ ಎಡಗೈಯಿಂದ ಅವಳ ಫೋನೆತ್ತಿ ಬೆರಳಲ್ಲಿ ತೆರೆದು ಸರೀ ನನ್ನ ಮುಖದೆದುರು ಹಿಡಿಯುತ್ತಾ 'ಈ ಹುಡುಗನ ಪ್ರಪೋಸಲ್ ಬಂದಿದೆ. ಯು.ಎಸ್.ನಲ್ಲಿದ್ದಾನೆ. ಹೀ ಈಸ್ ಡೂಯಿಂಗ್ ಹಿಸ್ ಪೋಸ್ಟ್ ಡಾಕ್... ಅಪ್ಪ ಅಮ್ಮ ಓಕೆ ಮಾಡಿ ನಂಗೆ ಕಳಿಸಿದ್ದಾರೆ. ನಿನ್ನೆ ಅವನು ನನ್ ಜೊತೆ ಮಾತಾಡ್ದ. ನೈಸ್ ಗೈ' ಎಂದಳು.

ಕೂತ ಕುರ್ಚಿ ಪಟಪಟನೆ ಮುರಿದಂತೆ ಚಡಪಡಿಸುತ್ತಾ 'ಓ ನೈಸ್, ಹ್ಯಾಂಡ್ಸಮ್... ಡೂ ಯೂ ಅಗ್ರೀ ಟೂ ಮ್ಯಾರಿ ಹಿಮ್' ಎಂದೆ ತುಸು ತಡೆದು. 'ಹುಂ ನಾನು ಒಪ್ಪಿಕೊಳ್ತೀನಿ ಅನ್ನಿಸುತ್ತೆ ದೇರ್ ಹಿಸ್ ನಥಿಂಗ್ ಟು ರಿಜೆಕ್ಟ್ ಹಿಮ್' ಎಂದಳು.

'ಬಟ್ ದೇರ್ ಶುಡ್ ಬಿ ಸಮ್ಥಿಂಗ್ ಟು ಅಗ್ರೀ... ಅವನನ್ನು ನಿರಾಕರಿಸೋಕೆ ಕಾರಣವಿಲ್ಲ ಎನ್ನುವ ಒಂದೇ ಕಾರಣಕ್ಕೆ ಅವನನ್ನು ಒಪ್ಪಿಕೋತೀಯಾ? ಸ್ಟ್ರೇಂಜ್' ಎಂದೆ ಕನಲುತ್ತ.

'ಎನಿವೇ ರಾತ್ರಿಗಳನ್ನು ಕಳೆಯೋಕೆ ಯಾರಾದರೇನು?' ಎಂದಳು ನನ್ನನೇ ನೋಡುತ್ತಾ. 'ಯೂ ಡರ್ಟಿ... ಮದುವೆ ಅಂದರೆ ರಾತ್ರಿಗಳನ್ನ ಕಳೆಯೋದು ಮಾತ್ರಾನಾ?' ಎಂದು ಬಿಟ್ಟಿದ್ದೆ.

'ಅಯ್ಯೋ ಇದನ್ನೆಲ್ಲ ಹೇಳಿದ್ದು ನೀನೇ ತಾನೆ' ಎಂದಳು ಲೇವಡಿ ಮಾಡುತ್ತಾ, ನನ್ನ ಮಾತನ್ನು ನನಗೇ ತಿರುಗಿಸುತ್ತಾ. ನಾನು ತುಸು ಖಾರವಾಗಿ 'ನೀನು ಹೇಳ್ತೀಯಲ್ಲ. ಅದೇನೋ ಮ್ಯಾಜಿಕ್... ಅದು ಆಯ್ತಾ ಅವನ ಜೊತೆ?' ಎಂದೆ.

'ಇಲ್ಲ' ಎಂದಳು ಚುಟುಕಾಗಿ

'ಮತ್ತೆ' ಎಂದೆ ಬಿರುಸಾಗಿ.

'ಮ್ಯಾಜಿಕ್ ಆಗುವವನಿಗೆ ವ್ಯಾಲ್ಯೂಸ್ ಇಲ್ಲದಿದ್ರೆ ಏನು ಮಾಡಕ್ಕಾಗುತ್ತೆ? ಬರೀ ದೇಹಗಳ ಮಿಲನಾನೆ ಬದುಕು ಅಂತ ಅವನಂದುಕೊಂಡ್ರೆ ನಾನ್ ತಾನೆ ಏನ್ ಮಾಡ್ಲಿ. ಇಷ್ಟಕ್ಕೂ ಬದುಕಂದ್ರೆ ಕಾಂಪ್ರೋಮೈಸ್ ತಾನೇ?' ಎಂದಳು ನಿರ್ಭಾವುಕಳಾಗಿ.

ಯಾಕೋ ದಿಗಿಲಾಗತೊಡಗಿತು. ಈ ಹುಡುಗಿ ಇನ್ನು ಹೆಚ್ಚೆಂದರೆ ಕೆಲ ತಿಂಗಳುಗಳು ಇಲ್ಲಿರುತ್ತಾಳೆ. ನಂತರ ಇವಳ ಕುರಿತು ಕನಸು ಕಾಣುವ ಅರ್ಹತೆಯೂ ನನಗುಳಿಯುವುದಿಲ್ಲ. ಇಲ್ಲ, ಇವಳನ್ನು ಇಷ್ಟು ಸುಖಾಸುಮ್ಮನೆ ಏನೂ ಅಲ್ಲದಂತೆ ಬಿಟ್ಟು ಬಿಡಲು ನನಗಾಗುತ್ತಿಲ್ಲ. ಆಗುತ್ತಲೇ ಇಲ್ಲ. ಇವಳು ನನ್ನ ಮಗ್ಗುಲಲ್ಲಿ ಅಲ್ಲವಾದರೂ ನನ್ನ ಕಣ್ಣೆದುರಾದರೂ ಉಳಿಸಿಕೊಳ್ಳಬೇಕು. ಅದಕ್ಕಾಗಿ ನಾನು ನಂಬಿಕೊಂಡ ನನ್ನ ಸಿದ್ಧಾಂತಗಳ ಸೌಧ ಲಟಲಟನೆ ಮುರಿದುಬಿದ್ದಂತಾಯ್ತು. ಆದರೆ ನನಗದು ಮಹತ್ವದ ಸಂಗತಿಯಾಗಿ ತೋರಲಿಲ್ಲ. ಕುರ್ಚಿಯನ್ನು ಅವಳ ಹತ್ತಿರ ಸರಿಸಿ ಅಲ್ಲೇ ಟೇಬಲಿನ ಸೆಂಟರ್ ಪೀಸಿನಲ್ಲಿದ್ದ ಕೆಂಗುಲಾಬಿಯನ್ನು ಕೈಯಲ್ಲಿ ಹಿಡಿದು ಅವಳ ಮುಂದೆ ಹಿಡಿಯುತ್ತ,

'ಮಿಸ್ ಉಮಾಮಣಿ, ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ನಿನ್ನನ್ನು ಬಿಟ್ಟು ಬದುಕುವ